ಅಶುಭ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದು ಮುಂತಾದವುಗಳನ್ನು ಕರ್ತವ್ಯದಂತೆ ಪಾಲಿಸುತ್ತೇವೆ. ಆದರೆ ನಮ್ಮ ಮುಂದಿನ ಪೀಳಿಗೆಯ ಜನರಲ್ಲಿ ಈ ಮೌಲ್ಯ ಕ್ಷೀಣಗೊಂಡಿದೆ. ಸ್ನೇಹ ಇಲ್ಲವೆಂದೇ ಭಾವಿಸುತ್ತಿಲ್ಲ. ಆದರೆ ಸ್ನೇಹದ ನಿರಂತರತೆ ನಗರವಾಸಿಗಳಲ್ಲಿ ಕಡಮೆಯಾಗುತ್ತಿದೆ. ಇದರಿಂದ ಸಿಗುವ ಸುಖ, ನೆಮ್ಮದಿಗಳೂ ಅಲಭ್ಯವಾಗಿವೆ. ಮುಂಬಯಿ ನಗರದ ಮಾನಸಿಕ ಶಿಕ್ಷಣ ಕೇಂದ್ರವೊಂದು ಭಾರತದಾದ್ಯಂತ ವೃದ್ಧ ಗಂಡಸರ ಏಕಾಂಗಿತನದ ಕಾರಣ ಹುಡುಕಲು ಒಂದು ಅಧ್ಯಯನ ನಡೆಸಿತು. ಅದರಲ್ಲಿ ತಿಳಿದುಬಂದ ಸಂಗತಿಯೆಂದರೆ ನೂರರಲ್ಲಿ ಎಂಬತ್ತು ಜನ ಗಂಡಸರಿಗೆ ಗೆಳೆಯರೇ ಇರಲಿಲ್ಲ! ಬಾಲ್ಯದ ಗೆಳೆಯರು ಚದುರಿಹೋಗಿದ್ದರು. ಉದ್ಯೋಗದ ಒತ್ತಡದಲ್ಲಿ ಇವರು ಯಾರನ್ನೂ ಗೆಳೆಯರೆಂದು ಆಪ್ತವಾಗಿಸಿಕೊಂಡಿರಲಿಲ್ಲ. ಹಾಗಾಗಿ ಅರುವತ್ತಕ್ಕೇ ಏಕಾಂಗಿಗಳಾಗಿದ್ದರು!

ಇಂದಿನ ಪೋಷಕರು ತಮ್ಮ ಮಕ್ಕಳು ಸ್ನೇಹಿತರನ್ನು ಹೊಂದಿದ್ದಾರೆಯೇ? ಸ್ನೇಹದ ಸುಖವನ್ನು ಅವರಿಂದ ಪಡೆಯುತ್ತಿದ್ದಾರೆಯೇ? ಇವರಿಂದ ಸ್ನೇಹಿತನಿಗೆ ಹಿತವಾಗುತ್ತಿದೆಯೇ? ತಾವು ಕಳಿಸುವ ತಿಂಡಿ, ನೀರುಗಳನ್ನು ಅಗತ್ಯಬಿದ್ದಾಗ ಹಂಚಿಕೊಳ್ಳುತ್ತಾರೆಯೇ? ಒಬ್ಬರ ಮನೆಗೆ ಒಬ್ಬರು ಹೋಗಲು ಮತ್ತು ಸದಾ ಜೊತೆಯಲ್ಲಿ ಇರಲು ಇಷ್ಟಪಡುತ್ತಾರೆಯೇ? ಇಂಥ ಪ್ರಶ್ನೆಗಳ ಕಡೆಗೂ ಗಮನ ಹರಿಸಬೇಕಾಗಿದೆ. ಕೊಟ್ಟು ಸುಖಿಸುವ, ಒಟ್ಟಿಗಿದ್ದು ಸುಖಿಸುವ ರೀತಿನೀತಿಗಳನ್ನು ಇಂದಿನ ಮಕ್ಕಳಿಗೆ ಹೇಳಿಕೊಡಬೇಕಾಗಿದೆ. ಒಮ್ಮೆ ನಗರದ ಹೊರವಲಯದ ಪ್ರತಿಷ್ಠಿತ ಶಾಲೆಯಲ್ಲಿ ಸಮಾರಂಭದ ಮುಖ್ಯ ಅತಿಥಿಯಾಗಿ ನನ್ನನ್ನು ಕರೆದಿದ್ದರು. ಮೂವತ್ತು ನಿಮಿಷ ಮುಂಚಿತವಾಗಿಯೇ ಶಾಲೆಗೆ ಹೋದೆ. ಶಾಲೆಯ ಅಂಗಳದಲ್ಲಿ ೫, ೬, ೭ ನೇ ತರಗತಿಯ ಮಕ್ಕಳು ಊಟಮಾಡುತ್ತಿದ್ದರು. ಗೇಟ್ ಮುಂದೆ ೫–೬ ಮಕ್ಕಳು ಅಮ್ಮ ತರುವ ಊಟಕ್ಕಾಗಿ ಕಾಯುತ್ತಿದ್ದರು. ಅದೇನು ಕಾರಣವೋ ಆ ಮಕ್ಕಳಿಗೆ ಬೆಲ್ ಆಗುವ ಸಮಯವಾದರೂ ಊಟ ಬರಲೇ ಇಲ್ಲ. ಊಟ ಮಾಡುತ್ತಿದ್ದ ಮಕ್ಕಳಿಗೆ ಆ ಹಸಿದ ತಮ್ಮದೇ ತರಗತಿಯ ಸ್ನೇಹಿತರ ಬಗ್ಗೆ ಒಂದಿಷ್ಟು ಗಮನವೂ ಇಲ್ಲ, ಚಿಂತೆಯೂ ಇಲ್ಲ. ದುರಂತವೆಂದರೆ ಅಲ್ಲಿ ಹತ್ತಾರು ಅಮ್ಮಂದಿರೂ ಇದ್ದರು. ಅವರ ಗಮನವೆಲ್ಲ ತಮ್ಮ ಮಗು ತಾವು ತಂದ ಡಬ್ಬಿ ಖಾಲಿಮಾಡುತ್ತದೋ ಇಲ್ಲವೋ ಎನ್ನುವುದರ ಬಗ್ಗೆ! ಬೆಲ್ ಹೊಡೆಯಿತು. ಆತುರಾತುರವಾಗಿ ಮಕ್ಕಳು ಒಳಗೆ ಓಡಿದರು. ಗೇಟ್ ಮುಂದೆ ನಿಂತಿದ್ದ ಹಸಿದ ಮಕ್ಕಳು, "ಯಾಕೋ ಅಮ್ಮ ಬರ್ಲೇ ಇಲ್ಲ" ಎನ್ನುತ್ತಾ ಕಾಲೆಳೆದುಕೊಂಡು ಒಳಗೆ ಹೋಗುವಾಗ ಅವರ ಕಣ್ಣುಗಳಲ್ಲಿ ನೀರಾಡುತ್ತಿತ್ತು. ಅಲ್ಲಿ ಸುಮಾರು ನೂರೈವತ್ತಕ್ಕೂ ಹೆಚ್ಚು ಮಕ್ಕಳಿದ್ದರು. ಒಬ್ಬೊಬ್ಬರ ಡಬ್ಬಿಯಿಂದ ಒಂದೊಂದು ಚಮಚೆ ಆಹಾರ ತೆಗೆದರೂ ಈ ಆರು ಮಕ್ಕಳ ಹೊಟ್ಟೆ ತುಂಬುತ್ತಿತ್ತು. ಅವರು ಕುಳಿತಲ್ಲಿ ಚೆಲ್ಲಿದ್ದ ಆಹಾರವೇ ಹತ್ತಾರು ಮಕ್ಕಳಿಗೆ ಸಾಕಾಗುತ್ತಿತ್ತು. ಇಲ್ಲಿ ಆಹಾರದ ಕೊರತೆ ಇರಲಿಲ್ಲ. ಅನುಕಂಪದ ಮನಸ್ಸಿನ ಕೊರತೆ ಇತ್ತು. ನಾನು ಈ ವಿಷಯವನ್ನು ಮುಖ್ಯೋಪಾಧ್ಯಾಯಿನಿಯ ಗಮನಕ್ಕೆ ತಂದದ್ದು, ಆಕೆ ಆ ಹಸಿದ ಮಕ್ಕಳಿಗೆ ಬಿಸ್ಕತ್ತು ಕೊಡಿಸಿದ್ದು, ಸ್ವಲ್ಪಹೊತ್ತಿಗೆ ಅವರ ಅಮ್ಮಂದಿರು ಊಟ ಹಿಡಿದು ಓಡೋಡಿ ಬಂದದ್ದು, ಇವೆಲ್ಲ ಮುಂದಿನ ಕಥೆ ಬಿಡಿ. ಆದರೆ ಈ ಮಕ್ಕಳನ್ನು ಸ್ವಲ್ಪವೂ ಗಮನಿಸದೆ ಉಳಿದ ಮಕ್ಕಳು ಊಟಮಾಡಿದ್ದು ನನ್ನ ದೃಷ್ಟಿಯಲ್ಲಿ ತಪ್ಪು ನಡವಳಿಕೆ.

ಇಂತಹ ಸಣ್ಣ ಸಣ್ಣ ವಿಚಾರಗಳನ್ನೂ ನಾನು ಯಾಕೆ ಪ್ರಸ್ತಾಪಿಸುತ್ತೇನೆಂದರೆ, ಈ ಸಣ್ಣ ಸಂಗತಿಗಳೇ ಮಕ್ಕಳ ಅರಿವಿನ ಕೋಶದೊಳಗೆ ಪುಟ್ಟ ಬೀಜಗಳಾಗಿ, ಮುಂದೆ ಮೊಳೆಯಲು ಸಿದ್ಧವಾಗುವುದು. ಸ್ನೇಹ ಅನ್ನುವ ಬೆಚ್ಚನೆಯ ಅನುಭವ ಮನುಷ್ಯನಿಗೆ ಅನೇಕ ಪುಳಕಗಳನ್ನು ತಂದುಕೊಡುತ್ತದೆ. ಸ್ನೇಹದ ನೆನಪೇ ಬೇಗುದಿಯ ಹೊತ್ತಿನಲ್ಲೂ ತಂಪನ್ನೆರೆಯುತ್ತದೆ. ಪೋಷಕರ ಅಜ್ಞಾನದ ಕಾರಣದಿಂದ ಇಂದಿನ ಮಕ್ಕಳು ಶುದ್ಧಸ್ನೇಹದಿಂದ ವಂಚಿತರಾಗುತ್ತಿದ್ದಾರೆ. "ಅವನು ನಿನ್ನನ್ನು ತಳ್ಳಿದನೇ? ನೀನವನ ಜೊತೆ ಆಟವಾಡಲೇಬೇಡ." "ನಿನಗವನು ಹೊಡೆಯುತ್ತಾನೆಯೇ? ಅವನನ್ನು ದೂರವಿಡು" ಇಂಥ ಮಾತುಗಳನ್ನು ಅತಿಜಾಣತನವನ್ನು ಹೇಳಿಕೊಡುವವರಂತೆ ನಿರರ್ಗಳವಾಗಿ ಉದುರಿಸಿಬಿಡುತ್ತೇವೆ. ಈ ಮಾತುಗಳು ಪದೇ ಪದೇ ಕಿವಿಯ ಮೇಲೆ ಬೀಳುತ್ತಿದ್ದರೆ ಮಕ್ಕಳಲ್ಲಿ ಎರಡು ಸ್ವಭಾವಗಳು ತನ್ನಷ್ಟಕ್ಕೆ ತಾನೇ ಹುಟ್ಟಿಕೊಂಡು ಬಿಡುತ್ತವೆ. ಒಂದು, ತಾನು ಸ್ವಾರ್ಥಿಯಾಗಿದ್ದರೆ ಮಾತ್ರ ಸುಖವಾಗಿರಬಲ್ಲೆ ಎನ್ನುವ ಭಾವ. ಮತ್ತೊಂದು, ತನಗೆ ಸಂಘಜೀವನದ ಅಗತ್ಯವಿಲ್ಲ ಎನ್ನುವ ನಂಬಿಕೆಯ ಭಾವ.

"ನನ್ನ ಮಗಳು ಶಾಲೆಗೆ ಹೋಗುತ್ತೇನೆಂದು ಹೇಳಿ, ಪಾರ್ಕಿನಲ್ಲಿ ಕುಳಿತಿರುತ್ತಾಳಂತೆ. ಒಂದು ತಿಂಗಳಿಂದ ಹೀಗೆ ಮಾಡಿದ್ದಾಳೆ. ನನಗೆ ಗೊತ್ತೇ ಆಗಿಲ್ಲ. ಮೊನ್ನೆ ಶಾಲೆಯಿಂದ ಪತ್ರ ಬಂದಾಗಲೇ ತಿಳಿದದ್ದು" ಎಂದು ಅಳುತ್ತಾ, ಏಳು

ವರ್ಷದ ಮಗುವನ್ನು ಆ ತಾಯಿ ಕರೆತಂದರು. ಅಷ್ಟು ಸಣ್ಣ ಮಗು ಖಿನ್ನತೆಗೆ ಒಳಗಾಗಿತ್ತು. 'ಶಾಲೆ' ಎಂದರೆ ನಿದ್ದೆಯಲ್ಲೂ ಬೆಚ್ಚಿಬೀಳುವ ದುಃಸ್ಥಿತಿಗೆ ತಲುಪಿತ್ತು. ಮಗುವಿನೊಡನೆ ಮಾತನಾಡುತ್ತಾ, ಆಡುತ್ತಾ ತಿಳಿದ ಸತ್ಯ, ಕಲ್ಲೆದೆಯನ್ನೂ ಕರಗಿಸುವಂಥದ್ದು. ಮಗುವಿನ ತಾಯಿ ಉದ್ಯೋಗಸ್ಥೆ. ಬೆಳಿಗ್ಗೆ ಬೇಗ ಮನೆ ಬಿಡುವುದರಿಂದ ಕೆಲಸದವಳು ಮಗುವಿಗೆ ತಲೆಬಾಚಿ, ಸಿದ್ಧಮಾಡಿ ಶಾಲೆಗೆ ಕಳಿಸುತ್ತಾಳೆ. ಮಗುವಿನ ತಲೆಯಲ್ಲಿ ಹೇನು ಬಂದಿದೆ. ಈ ಮಗುವಿನ ಪಕ್ಕದಲ್ಲಿ ಕುಳಿತುಕೊಳ್ಳುವ ಮತ್ತೊಂದು ಮಗು ಇದರ ಪರಮಾಪ್ತ ಗೆಳತಿ. ಇದರ ತಲೆಯಿಂದ ಹೇನು ಆ ಮಗುವಿನ ತಲೆಗೂ ಹರಿದಿದೆ. ಈ ಪರಮಾಪ್ತ ಗೆಳತಿಯ ತಾಯಿ ತನ್ನ ಮಗಳ ತಲೆಯಲ್ಲಿ ಹೇನನ್ನು ನೋಡಿ, ಕೆಂಡಾಮಂಡಲವಾಗಿ ತರಗತಿ ನಡೆಯುತ್ತಿದ್ದಾಗಲೇ ನೇರವಾಗಿ ಒಳಗೇ ಧಾವಿಸಿದ್ದಾಳೆ. "ನನ್ನ ಮಗಳ ಪಕ್ಕ ಕುಳಿತುಕೊಳ್ಳುವ ಹುಡುಗಿ ಯಾರು? ಅವಳ ತಲೆಯಲ್ಲಿ ಹೇನಿದೆ. ಅದು ನನ್ನ ಮಗಳಿಗೂ ಬಂದಿದೆ" ಎಂದೆಲ್ಲಾ ದೂರಿದ್ದಾಳೆ. ಉಪಾಧ್ಯಾಯಿನಿ ಏನೋ ಸಮಾಧಾನ ಮಾಡುವ ಹೊತ್ತಿಗೇ ಈ ಮಗುವಿನ ಹಿಂದೆ ಕುಳಿತ ಹುಡುಗಿಗೆ ಇವಳ ತಲೆಯಲ್ಲಿ ಹೇನು ಓಡಾಡುತ್ತಿರುವುದು ಕಂಡಿದೆ. "ಮಿಸ್ ಇವಳ ತಲೇಲೇ ಹೇನಿರೋದು" ಎಂದು ಕೂಗಿಬಿಟ್ಟಿದೆ. ಅಲ್ಲಿಗೆ ಆ ಮಗುವಿನ ಮಾನದ ಮಟ್ಟ ನೆಲಕಚ್ಚಿದೆ. ಅಂದಿನ ದಿನದ ಅವಮಾನವನ್ನು ಮಗು ಹೇಗೋ ನುಂಗಿಕೊಂಡಿದೆ. ಆದರೆ ಮರುದಿನ ಶಾಲೆಗೆ ಹೋದರೆ ಇದರ ಪಕ್ಕ ಕುಳಿತುಕೊಳ್ಳಲು ಯಾವ ಮಗುವೂ ತಯಾರಿಲ್ಲ! ಒಂದಲ್ಲ, ಎರಡಲ್ಲ, ಸತತ ಏಳುದಿನ ಈ ಅಪಮಾನವನ್ನು ಸಹಿಸಿದ ಮಗುವಿಗೆ ಶಾಲೆ ಅಸಹನೀಯವಾಗಿದೆ. ಮನೆಯಲ್ಲಿ ಹೇಳಿಕೊಳ್ಳಲು ಅಪ್ಪ ಅಮ್ಮ ಇಬ್ಬರೂ ಬಿಡುವಿಲ್ಲದ ವ್ಯಕ್ತಿಗಳು. ತಾನು ಮಾಡದೇ ಇರುವ ತಪ್ಪಿಗೆ ಶಿಕ್ಷೆಯನ್ನು ಅನುಭವಿಸಬೇಕಾಗಿ ಬಂದರೆ ಖಿನ್ನತೆಯಲ್ಲದೆ ಮತ್ತೇನು ಆಗಲು ಸಾಧ್ಯ?


ಶಾಲೆಗೆ ಹೋಗುವ ಮಕ್ಕಳ ತಲೆಯಲ್ಲಿ ಹೇನಿರುವುದು ಸರ್ವೇಸಾಮಾನ್ಯವಾದ ಸಂಗತಿ. ಮಕ್ಕಳಿಗೇನು, ಉಪಾಧ್ಯಾಯಿನಿಯ ತಲೆಯಲ್ಲೂ ಇರಬಹುದು. ಅಷ್ಟೇಕೆ ಮಕ್ಕಳ ತಾಯಂದಿರ ತಲೆಗೂ ಅವು ಹತ್ತುತ್ತವೆ. ಇವಕ್ಕೆ ಬೇರೆ ಉಪಾಯಗಳಿಲ್ಲವೆ? ಹೇನು ನಿವಾರಕಗಳು ಎಷ್ಟಿವೆ, ಮಾರುಕಟ್ಟೆಯಲ್ಲಿ. ಅಲ್ಲದೆ ವಾರಕ್ಕೆರಡು ಅಥವಾ ಮೂರು ಬಾರಿ ತಲೆ ತೊಳೆಯುತ್ತಿದ್ದರೆ, ಹೇನು ಬಂದರೂ, ನಿಲ್ಲುವುದಿಲ್ಲ. ಇಂಥ ಸಣ್ಣ ವಿಷಯವನ್ನು ದೊಡ್ಡದು ಮಾಡಿ, ತನ್ನ ಮಗಳ ಪರಮಾಪ್ತ ಗೆಳತಿಯನ್ನು ಅವಮಾನಿಸಿ, ಆ ತಾಯಿ ಏನು ಸಾಧಿಸಿದಳು? ಒಂದು ವಾರವಿಡೀ ತರಗತಿಯ ಮಕ್ಕಳು ಈ ಮಗುವಿಗೆ ಬಹಿಷ್ಕಾರ ಹಾಕಿದ್ದನ್ನು ಉಪಾಧ್ಯಾಯಿನಿ ಏಕೆ ಗಮನಿಸಲಿಲ್ಲ? ಎಲ್ಲಕ್ಕಿಂತ ಮುಖ್ಯವಾಗಿ ಎಂಥದೇ ಉದ್ಯೋಗಸ್ಥೆಯಾಗಿದ್ದರೂ ಮಗುವಿನ ತಾಯಿ, ತನ್ನ ಮಗಳ ತಲೆಯ ಶುಚಿತ್ವದ ಕಡೆಗೂ ಗಮನ ಹರಿಸಬೇಕಾಗಿತ್ತಲ್ಲವೆ? ದೊಡ್ಡವರ ತಪ್ಪುಗಳಿಗೆ ಬಲಿಪಶುವಾದದ್ದು ಬಡಪಾಯಿ ಏಳು ವರ್ಷದ ಪುಟ್ಟ ಕಂದಮ್ಮ!

ಮನೆಯ ಸದಸ್ಯರು ಮತ್ತು ನೆಂಟರುಗಳ ಮಾತು, ನಡವಳಿಕೆಗಳು ಮಕ್ಕಳ ಬದುಕಿನಲ್ಲಿ ಬಹಳ ಮುಖ್ಯವಾದ ಪಾತ್ರವನ್ನು ವಹಿಸುತ್ತವೆ. ಅನೇಕ ಕುಟುಂಬಗಳಲ್ಲಿ ಹಿರಿಯರು ತಮ್ಮ ಮನೆಯ ಮಕ್ಕಳನ್ನು ತುಂಬ ಸುಖ ಸಂತೋಷಗಳಿಂದ ಪಾಲಿಸುತ್ತಾರೆ. ಹಳ್ಳಿಗಳಲ್ಲಿ ಈ ನೆಂಟಸ್ತಿಕೆಯ ಭಾವನೆ ಎನ್ನುವುದು ತುಂಬ ಸಮೃದ್ಧವಾಗಿ ಹರಡಿರುತ್ತದೆ. ನಮ್ಮ ಪರಿಚಿತರೊಬ್ಬರು ನಲವತ್ತು ವರ್ಷದ ಕೆಳಗೆ, ಶಿವಮೊಗ್ಗ ಹತ್ತಿರದ ಹಳ್ಳಿಯಿಂದ ಬೆಂಗಳೂರಿಗೆ ಬಂದರು. ಅವರ ಅಣ್ಣ ತಮ್ಮಂದಿರ, ಅಕ್ಕತಂಗಿಯರ, ದೊಡ್ಡಪ್ಪ ಚಿಕ್ಕಪ್ಪಂದಿರ, ಸೋದರತ್ತೆ ಚಿಕ್ಕಮ್ಮ ದೊಡ್ಡಮ್ಮ ಈ ಎಲ್ಲರ ಸುಮಾರು ೫೦ಕ್ಕೂ ಹೆಚ್ಚು ಮಕ್ಕಳು ಇವರ ಮನೆಯಲ್ಲಿದ್ದು, ವಿವಿಧ ವಿದ್ಯಾಭ್ಯಾಸಗಳನ್ನು ಪೂರೈಸಿ, ದೇಶದಲ್ಲಷ್ಟೇ ಅಲ್ಲ ಪರದೇಶಗಳಲ್ಲೂ ಸುಂದರ ಬದುಕನ್ನು ಕಟ್ಟಿಕೊಂಡಿದ್ದಾರೆ. ಇವತ್ತಿಗೂ ಅವರ ಮನೆಯಲ್ಲಿ ಕಡೇ ಪಕ್ಷ ಐದು ಮಕ್ಕಳು ಓದುತ್ತಿರುತ್ತಾರೆ. ಹೆಚ್ಚೇಕೆ, ನನ್ನ ತಂದೆಯ ಮನೆಯಲ್ಲೂ ಅಷ್ಟೇ. ನನ್ನ ಬಾಲ್ಯದಲ್ಲಿ ಹತ್ತಾರು ನೆಂಟರ ಮಕ್ಕಳು ನಮ್ಮಲ್ಲೇ ಇದ್ದು, ವಿದ್ಯಾಭ್ಯಾಸ ಮಾಡುತ್ತಿದ್ದರು. ಇದರಿಂದ ಮನೆಯ ಮಕ್ಕಳಿಗೂ ಒಳಿತಾಗುತ್ತಿತ್ತು. ದೊಡ್ಡಮಕ್ಕಳು ಸಣ್ಣವರಿಗೆ ಪಾಠ ಹೇಳಿಕೊಡುತ್ತಿದ್ದರು. ಮನೆಯ ಸಮಸ್ತ ಕೆಲಸವನ್ನೂ ಹಂಚಿಕೊಂಡು ಮಾಡುತ್ತಿದ್ದರು. ಇಂದು ಇಂತಹ ಪದ್ಧತಿಗಳು ವಿರಳವಾಗುತ್ತಿವೆ. ನೆಂಟರ ನಡುವೆಯೇ ಸೌಹಾರ್ದತೆಯಿಲ್ಲ. ಇನ್ನು ಮಕ್ಕಳ ಪಾಲಿಗೆ ಅದು ದಕ್ಕುವುದೂ ಇಲ್ಲ. ಇದಕ್ಕೆ ವಿರುದ್ಧದ ಪರಿಸ್ಥಿತಿಯನ್ನು ಇಂದಿನ ಮಕ್ಕಳು ಎದುರಿಸುತ್ತಿದ್ದಾರೆ. ಇಷ್ಟೆಲ್ಲಾ ಹೇಳಿದ್ದು, ಏಕೆ ಗೊತ್ತೆ? ದೊಡ್ಡವರು ಮಕ್ಕಳನ್ನು ನಡೆಸಿಕೊಳ್ಳುವ ರೀತಿ ಬದಲಾಗುವವರೆಗೆ, ನಮ್ಮ ಮಕ್ಕಳ ಸಂಕಷ್ಟ ತಪ್ಪಿದ್ದಲ್ಲ. ಹಾಗಾದರೆ ದೊಡ್ಡವರಾದ ನಾವು, ನಮ್ಮ ನಡವಳಿಕೆಯನ್ನು ತಿದ್ದಿಕೊಳ್ಳಲು ಪ್ರಯತ್ನಿಸಬೇಕಲ್ಲವೆ?

**(ಆಧಾರ: *ಶಾಲಾಮಕ್ಕಳ ಪೋಷಕರಿಗೆ ಕಿವಿಮಾತು*)**

# ಕಾನೂನು ಮತ್ತು ಕೌಟುಂಬಿಕ ಸುವ್ಯವಸ್ಥೆ

ಡಾ. ಸಿ.ಕೆ.ಎನ್. ರಾಜ




**೧. ಕುಟುಂಬದ ಕಲ್ಪನೆ :** ಜನಗಣತಿಯ ಅಧಿಕಾರಿಯೊಬ್ಬರು ಗಾಂಧೀಜಿಯವರ ಬಳಿ ಹೋಗಿ, "ನಿಮ್ಮ ಕುಟುಂಬದ ಸದಸ್ಯರ ಸಂಖ್ಯೆ ಎಷ್ಟು?" ಎಂದು ಕೇಳಿದರು. ಆಗ ಬಾಪೂಜಿಯವರು, "ನಲವತ್ತು ಕೋಟಿ" ಎಂದು ಉತ್ತರಿಸಿದಾಗ, ಅಧಿಕಾರಿ ನಿರುತ್ತರನಾದ. ಸಮಗ್ರ ಮಾನವರೆಲ್ಲಾ ತನ್ನ ಕುಟುಂಬದ ಸದಸ್ಯರೇ (**ವಸುಧೈವ ಕುಟುಂಬಕಮ್**) ಎಂಬ ಇಂಥ ಉದಾತ್ತ ಭಾವನೆ ನಮ್ಮಲ್ಲಿ ಎಷ್ಟು ಜನರಿಗಿದೆ? ಇಲ್ಲಿ, ಆ ವಿಶಾಲವಾದ ಅರ್ಥದಲ್ಲಿ ನಾವು ಕುಟುಂಬವನ್ನು ವಿವರಿಸುತ್ತಿಲ್ಲ. ಕಾನೂನಿನ ಚೌಕಟ್ಟಿನಲ್ಲಿ ಕುಟುಂಬದ ಸ್ಥಾನಮಾನವನ್ನು ವಿಶ್ಲೇಷಿಸುತ್ತಿದ್ದೇವೆ.

**೨. ಕಾನೂನಿನ ಅಡಿಯಲ್ಲಿ ಕುಟುಂಬ:** ಈ ಲೇಖನದ ಶೀರ್ಷಿಕೆ ವಿಶಾಲವಾದ ಅರ್ಥವ್ಯಾಪ್ತಿಯನ್ನು ಹೊಂದಿದೆ. ಮುಖ್ಯವಾಗಿ ನಮ್ಮ ಮುಂದೆ ಬರುವ ಸಮಸ್ಯೆ 'ಯಾವ ಕಾನೂನು?' ಎಂಬುದು. ಹಿಂದೂ ಕಾನೂನೇ? ಮುಸ್ಲಿಂ ಕಾನೂನೇ? ಕ್ರೈಸ್ತರ ಕಾನೂನೇ? ಪಾರ್ಸಿಗಳ ಕಾನೂನೇ? ಜೈನರ ಕಾನೂನೇ? ಬೌದ್ಧರ ಕಾನೂನೇ? ಪರಿಶಿಷ್ಟ ವರ್ಗಗಳಲ್ಲಿರುವ ಕಾನೂನು ಕಟ್ಟಳೆಗಳೇ? ಇವೆಲ್ಲವನ್ನೂ ಪರಿಗಣಿಸಲು ಹೊರಟರೆ ಒಂದು ಪುಸ್ತಕವನ್ನೇ ಬರೆಯಬೇಕಾಗುತ್ತದೆ. ಆದ್ದರಿಂದ ಈ ಲೇಖನ ಹಿಂದೂ ಕಾನೂನಿನಡಿಯಲ್ಲಿ ಕೌಟುಂಬಿಕ ಸುವ್ಯವಸ್ಥೆ ಯಾವರೀತಿ ಕಾಪಾಡಲ್ಪಟ್ಟಿದೆ ಎಂಬುದರ ವಿಶ್ಲೇಷಣೆಗೆ ಸೀಮಿತವಾಗಿದೆ.

**೩. ಹಿಂದೂ ಕಾನೂನು ಮತ್ತು ಕುಟುಂಬ :** ಪ್ರಾಚೀನ ಕಾಲದಿಂದಲೂ ಹಿಂದೂಗಳಲ್ಲಿ ಎರಡು ಬಗೆಯ ಕೌಟುಂಬಿಕ ವ್ಯವಸ್ಥೆಯನ್ನು ನಾವು ಕಾಣುತ್ತೇವೆ. ೧. ಅವಿಭಕ್ತ ಕುಟುಂಬ ; ೨. ವಿಭಕ್ತ ಕುಟುಂಬ.

ಅವಿಭಕ್ತ ಕುಟುಂಬದ ಯಜಮಾನನನ್ನು 'ಕರ್ತ' ಎಂದು ಕರೆಯುತ್ತಾರೆ. ಪಿತೃಪ್ರಧಾನವಾದ ನಮ್ಮ ವ್ಯವಸ್ಥೆಯಲ್ಲಿ ಕರ್ತ ಯಾವಾಗಲೂ ಗಂಡಸೇ ಆಗಿರುತ್ತಾನೆ. ಮುತ್ತಾತ, ತಾತ, ತಂದೆ ಮತ್ತು ಇವರ ಗಂಡುಮಕ್ಕಳೆಲ್ಲಾ ಅವಿಭಕ್ತ ಕುಟುಂಬದ ಸದಸ್ಯರಾಗಿರುತ್ತಿದ್ದರು. ಇತ್ತೀಚಿನ ಸುಧಾರಣಾವಾದಿ ಕಾನೂನುಗಳ ಪರಿಣಾಮವಾಗಿ, ಹೆಣ್ಣುಮಕ್ಕಳನ್ನೂ

ಇಂದಿನ ದಿನಗಳಲ್ಲಿ ಕುಟುಂಬದಲ್ಲಿ ಅನೇಕ ವಿರಸಗಳು ಕಂಡುಬರುವುದನ್ನು ನೋಡುತ್ತೇವೆ. ಇಂತಹ ಸಂದರ್ಭದಲ್ಲಿ ಕಾನೂನಿನ ತಿಳಿವಳಿಕೆ ಬಹಳ ಮುಖ್ಯ. ಕಾನೂನು ಒಂದು ಕುಟುಂಬವನ್ನು ಒಟ್ಟಿಗೆ ಇರಿಸಲು ಪ್ರಯತ್ನ ಪಡುತ್ತದೆಯೇ ಹೊರತು, ವಿಭಜಿಸಲು ಅಲ್ಲ. ಈ ಅಂಶವನ್ನು ಖಚಿತ ಮತ್ತು ನಿರ್ದುಷ್ಟವಾಗಿ ತಿಳಿಸಿಹೇಳಿರುವ ಲೇಖಕರು ನಾಡಿನ ಅತ್ಯಂತ ಹಿರಿಯ ಕಾನೂನುತಜ್ಞರಲ್ಲಿ ಒಬ್ಬರು. ಜನಪ್ರಿಯ ಭಾಷಣಕಾರರಾದ ಇವರು, ಹಲವಾರು ಗ್ರಂಥಗಳನ್ನು ರಚಿಸಿದ್ದಾರೆ.

ಗಂಡು ಮಕ್ಕಳಂತೆಯೇ ಪರಿಗಣಿಸಿ, ಆಸ್ತಿಯನ್ನು ಕುರಿತಂತೆ, ಸಮಾನ ಹಕ್ಕನ್ನು– ಕೆಲವು ಇತಿಮಿತಿಗಳಿಗೊಳಪಡಿಸಿ – ಅವರಿಗೂ ನೀಡಲಾಗಿದೆ.

ಆಸ್ತಿಯಲ್ಲಿ ಎರಡು ಬಗೆಯಿದೆ. ಅವಿಭಕ್ತ ಕುಟುಂಬದ ಆಸ್ತಿ ಮತ್ತು ಸ್ವಯಾರ್ಜಿತ ಆಸ್ತಿ. ಸ್ವಯಾರ್ಜಿತ ಆಸ್ತಿಯ ವಿಲೇವಾರಿ ಮತ್ತು ಅವಿಭಕ್ತ ಕುಟುಂಬದ ಆಸ್ತಿಯ ವಿಲೇವಾರಿ ಬಗ್ಗೆ ನಿರ್ದಿಷ್ಟವಾದ ಕಾನೂನುಗಳಿವೆ. ಕೌಟುಂಬಿಕ ಅವ್ಯವಸ್ಥೆಗೆ ಮೂಲ ಕಾರಣ ಈ ಕಾನೂನುಗಳ ಉಲ್ಲಂಘನೆ. ಅಣ್ಣನ ವಿರುದ್ಧ ತಮ್ಮ, ತಂದೆಯ ವಿರುದ್ಧ ಮಕ್ಕಳು, ಅಕ್ಕನ ವಿರುದ್ಧ ತಮ್ಮ ಅಥವಾ ತಂಗಿ ಇತ್ಯಾದಿ ಮೊಕದ್ದಮೆಗಳು ನ್ಯಾಯಾಲಯದ ಮುಂದೆ ಬಂದಾಗ, ಕೌಟುಂಬಿಕ ಸಾಮರಸ್ಯ ಕುಲಗೆಟ್ಟು ಹೋಗಿ, ಸಂಸಾರ ಆನಂದಸಾಗರವಾಗದೆ ರಣರಂಗವಾಗುತ್ತದೆ. ಎಲ್ಲರೂ ಕಾನೂನನ್ನು ಗೌರವಿಸಿ, ಅದರಂತೆ ನಡೆದುಕೊಂಡರೆ ಕುಟುಂಬ ಸುವ್ಯವಸ್ಥಿತವಾಗಿ ನಡೆಯುತ್ತದೆ.

ಭಾರತದ ಕೆಲವು ಭಾಗಗಳಲ್ಲಿ ಮಾತೃಪ್ರಧಾನವಾದ ಕೌಟುಂಬಿಕ ವ್ಯವಸ್ಥೆಯಿದೆ. ಮಹಿಳೆಯೇ ಸಮಗ್ರ ಆಸ್ತಿಯ ಒಡತಿಯಾಗಿದ್ದು, ಹೆಣ್ಣು ಮಕ್ಕಳಿಗೆ ಆಸ್ತಿಯ ಹಕ್ಕು ಬರುತ್ತದೆ. ಪ್ರಮುಖವಾಗಿ ಬಂಗಾಳ ಪ್ರಾಂತ್ಯದಲ್ಲಿ 'ದಾಯಭಾಗ' ಎಂಬ ವ್ಯವಸ್ಥೆಯಿದೆ.

ಆಸ್ತಿಗೆ ಸಂಬಂಧಿಸಿದ ವ್ಯಾಜ್ಯಗಳೇ ಕೌಟುಂಬಿಕ ಅವ್ಯವಸ್ಥೆಗೆ, ಅಶಾಂತಿಗೆ ಮೂಲ ಕಾರಣಗಳು. ಕುಟುಂಬವನ್ನು ಸುವ್ಯವಸ್ಥಿತಗೊಳಿಸಲು ಅನೇಕ ಕಾನೂನುಗಳನ್ನು ಮಾಡಲಾಗಿದೆ. ಅವುಗಳಲ್ಲಿ ಕೆಲವು ಹೀಗಿವೆ:

**೧. ಹಿಂದೂ ವಿವಾಹ ಕಾಯಿದೆ – ೧೯೫೫**
**೨. ಹಿಂದೂ ವಿವಾಹಗಳ ನೋಂದಣಿ ನಿಯಮಗಳು**
**೩. ವಿಶೇಷ ವಿವಾಹ ಕಾಯಿದೆ – ೧೯೫೪**
**೪. ಹಿಂದೂ ಉತ್ತರಾಧಿಕಾರ ಕಾಯಿದೆ – ೧೯೫೬**
**೫. ಹಿಂದೂ ಮೈನಾರಿಟಿ ಮತ್ತು ಸಂರಕ್ಷಕ ಶಾಸನ – ೧೯೫೬**
**೬. ಹಿಂದೂ ದತ್ತು ಸ್ವೀಕಾರಗಳು ಮತ್ತು ಪರಿಹಾರಗಳ ಶಾಸನ – ೧೯೫೬**
**೭. ಹಿಂದೂ ಆಸ್ತಿ ವಿಲೇವಾರಿ ಶಾಸನ – ೧೯೧೬**
**೮. ವಿಚ್ಛೇದನ ಶಾಸನ – ೧೮೬೯**
**೯. ಕುಟುಂಬ ನ್ಯಾಯಾಲಯಗಳ ಶಾಸನ – ೧೯೮೪**

ಪ್ರಸ್ತುತ ಈ ಲೇಖನದಲ್ಲಿ ಪ್ರಧಾನವಾಗಿ ಹಿಂದೂ ವಿವಾಹ ಮತ್ತು ವಿಚ್ಛೇದನವನ್ನು ಕುರಿತ ಶಾಸನಗಳನ್ನು, ಕೌಟುಂಬಿಕ ಸುವ್ಯವಸ್ಥೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ವಿಶ್ಲೇಷಿಸಲಾಗಿದೆ.

**೪. ಹಿಂದೂ ವಿವಾಹ ಶಾಸನಗಳು ಮತ್ತು ದತ್ತು ಸ್ವೀಕಾರ :** ವೈವಾಹಿಕ ಸಾಮರಸ್ಯವೇ ಸುವ್ಯವಸ್ಥಿತ ಕೌಟುಂಬಿಕ ಜೀವನದ ಪ್ರಮುಖ ಅಂಶವೆಂಬುದನ್ನು ಎಲ್ಲರೂ ಗಮನಿಸಬೇಕು. ವೈವಾಹಿಕ ವಿರಸವೇ ಕೌಟುಂಬಿಕ ಅಶಾಂತಿಯ ಮೂಲ. ಕೌಟುಂಬಿಕ ಅಶಾಂತಿಯಿಂದಾಗುವ ಅನಾಹುತ ಒಂದೆರಡಲ್ಲ. ಇದು ಕುಟುಂಬದ ಇತರ ಸದಸ್ಯರು, ಅಕ್ಕಪಕ್ಕದವರು, ಮಕ್ಕಳು ಮತ್ತು ಸಮಾಜದ ಮೇಲೆ ಬೀರುವ ಪರಿಣಾಮ ಅಷ್ಟಿಷ್ಟಲ್ಲ. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡೇ ನಮ್ಮ ಪೂರ್ವಜರು ವೈವಾಹಿಕ ವ್ಯವಸ್ಥೆಯನ್ನು ತುಂಬಾ ಜಾಣ್ಮೆಯಿಂದ ನಿರೂಪಿಸಿದರು. ಅವರ ಕಲ್ಪನೆಯಲ್ಲಿ ವಿವಾಹವೆಂಬುದು ಸ್ತ್ರೀಪುರುಷರ ಲೈಂಗಿಕ ಸಂಬಂಧಕ್ಕೆ ನೀಡುವ ಸಾಮಾಜಿಕ ಪರವಾನಗಿಯಲ್ಲ. ಅದೊಂದು ಪವಿತ್ರವಾದ ಬಂಧ, ಸಂಬಂಧ ಹಾಗೂ ಅನುಬಂಧ. **ಧರ್ಮೇ ಚ, ಅರ್ಥೇ ಚ, ಕಾಮೇ ಚ ನಾತಿಚರಾಮಿ** – ಗಂಡನಾದವನು 'ಧರ್ಮದಲ್ಲಿ, ಅರ್ಥದಲ್ಲಿ, ಕಾಮದಲ್ಲಿ ನಿನ್ನನ್ನು ಬಿಟ್ಟುಹೋಗುವುದಿಲ್ಲ' ಎಂಬ ಪ್ರತಿಜ್ಞಾಸ್ವೀಕಾರ ಮಾಡಿ, ತನ್ನ ಪತ್ನಿಯ ಪಾಣಿಗ್ರಹಣ ಮಾಡುವುದರ ಹಿಂದೆ ಮಹತ್ತರವಾದ ಅರ್ಥವಿದೆ ಹಾಗೂ ಭಾವನೆಗಳಿವೆ. ಈ ಮೂಲಕ ದಂಪತಿಗಳಿಬ್ಬರ ಮೇಲೂ ಸಾಮಾಜಿಕ ಹೊಣೆಗಾರಿಕೆಯನ್ನು ವಿಧಿಸಲಾಗಿದೆ. ಅದೇ ನಮ್ಮ ಸಾಮಾಜಿಕ ಸುವ್ಯವಸ್ಥೆಗೆ ಬೀಜಮಂತ್ರವೂ ಆಗಿತ್ತು. ಅಗ್ನಿಸಾಕ್ಷಿಯಾಗಿ ಮದುವೆಯಾಗುವುದೇ ಪರಿಶುದ್ಧ ಜೀವನಕ್ಕೆ ನಾಂದಿ. ಗುರುಹಿರಿಯರ ಒಪ್ಪಿಗೆಯಿಂದ ಮದುವೆಗಳು ನಡೆಯುತ್ತಿದ್ದವು. ಹೀಗೆ ಮದುವೆಯಾದವರಲ್ಲಿ ಬಹಳಷ್ಟು ಜನ –ಅತ್ಯಂತ ವಿರಳ ಅಪವಾದಗಳನ್ನು ಹೊರತುಪಡಿಸಿ– ಯಶಸ್ವಿ ದಾಂಪತ್ಯಜೀವನವನ್ನು ನಡೆಸಿ ಕೌಟುಂಬಿಕ ವ್ಯವಸ್ಥೆಯನ್ನು ಚೆನ್ನಾಗಿ ಕಾಪಾಡಿಕೊಂಡು ಬಂದಿದ್ದಾರೆ.